Aid to Co-operative Banks and Societies

96. Sri MAHADEV G. BANAKAR (Byadgi).—

Will the Minister for Development and Co-operation be pleased to state :—

(*a*) the co-operative banks and co-operative societies which have received aid from the Government together with the aid so taken;

(*b*) out of them, the number of banks and co-operative societies which are overdue;

(*c*) the action taken in respect of such banks and co-operative societies?

A.—Sri P. M. NAD GOUDA (Minister for Development and Co-operation).—

(*a*) *Vide* statement placed on the Table of the House.**

(*b*) 775.

(*c*) Demand notices are issued to Loanee Institutions through the Assistant Registrars with instructions to all the Assistant Registrars and Deputy Registrars to recover the overdue instalments promptly and action is being taken by them accordingly by almost all the officers. Further, whenever the Registrar visits those places the same matter is being pressed on all the subordinate staff also.

ಅಧ್ಯಕ್ಷರೇ, ಹಾಲ ಒದಗಿಸಿರತಕ್ಕ ಉತ್ತರದ ಬಗ್ಗೆ ಒಂದು ತಿದ್ದುಪಡಿಯನ್ನು ಸೂಚಿಸ ಬೇಕಾಗಿದೆ. ಅದೇನೆಂದರೆ—(ಬ)ಗೆ ಉತ್ತರವಾಗಿ 775 ಎಂದು ಹೇಳಿರುವುದರಲ್ಲಿ 3 ವರ್ಷಕ್ಕೆ ಮೇಲ್ಪಟ್ಟು ಸುಸ್ತಿಯಲ್ಲಿರುವ ಸಂಖ್ಯೆ 135 ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ.

ಶ್ರೀ ಮಹದೇವ್ ಜಿ. ಬಣಕಾರ್.—ಸ್ವಾಮಿ, ನನ್ನ (ಸಿ) ಪ್ರಶ್ನೆಗೆ ಇಲ್ಲಿ ಒದಗಿಸಿರತಕ್ಕ ಉತ್ತರದಲ್ಲಿ ಹಣದ ವಸೂಲಿಯನ್ನು ಮಾಡಬೇಕೆಂದು ಇವರು ಅಧಿಕಾರಿಗಳಿಗೆ ತಿಳಿಸಿದ್ದರೂ ಅವರು ಯಾರಿಂದಲೂ ಸಾಲವನ್ನು ವಸೂಲ್ಮಾಡಿಲ್ಲ, ಅವರು ಯಾರೋ ಶ್ರೀಮಂತರಲ್ಲಿ ಹಣವನ್ನು ತಂದು ಇವರಿಗೆ ಕೊಟ್ಟಂತೆ ಮಾಡಿ ಪುನಃ ಅದೇ ಹಣವನ್ನು ಅವರು ವಾಪಸ್ ಪಡೆದು ಅಲ್ಲಿ ಒಂದು ಹೊಸಪತ್ರವನ್ನು ಮಾಡಿ ದ್ದಾರೆಯೇ ವಿನಾ ಹಣ ವಸೂಲಾಗಿಲ್ಲ; ಹಾಗೆ ವಸೂಲಾಗಿದ್ದರೆ ಅಷ್ಟು ಸೊಸೈಟಿಗಳಲ್ಲಿ ಬಾಕಿ ಉಳಿಯತಕ್ಕ ಅವಕಾಶವಿರಲಿಲ್ಲ. ಈಗ ವಸೂಲಾಗದೆ ಹಾಗೇ ಉಳಿದಿರತಕ್ಕ ಹಣದ ಗತಿ ನನ್ನ ಪ್ರಶ್ನೆಗೆ ಕೊಟ್ಟರತಕ್ಕ ಗೂಟನಾಮ ಅಂದರೆ ಮೂರು ನಾಮವೇ ಗತಿ ಎಂದು ತಿಳಿದುಕೊಳ್ಳೋಣವೇ, ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಅಂಥ ಸಂದರ್ಭಗಳಿದ್ದರೆ ಅವುಗಳನ್ನು ಸರ್ಕಾರದ ನಜರಿಗೆ ತಂದರೆ ಉಗ್ರ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಈ 775 ಸೊಸೈಟಿಗಳಲ್ಲೂ ಡಿಫಾರ್ಟ್ ಆಗಿರತಕ್ಕ ಹಣವೆಷ್ಟು ?

ಶ್ರೀ ಪಿ. ಎಂ. ನಾಡಗೌಡ,—135 ಸೊಸೈಟಿಗಳಲ್ಲಿ ಓವರ್‌ಡ್ಯೂ ಆಗಿ 3 ವರ್ಷಕ್ಕೆ ಮೇಲ್ಪಟ್ಟು ಒಂದು ದಿನವಾದರೂ ಅದನ್ನು ಓವರ್‌ಡ್ಯೂ ಎಂದು ಪರಿಗಣಿಸಲಾಗುತ್ತದೆ.

ಶ್ರೀ ಮಹದೇವ್ ಜಿ. ಬಣಕಾರ್.—ಸುಮಾರು 10 ವರ್ಷಗಳ ಕೆಳಗೆ ಸಾಲ ಪಡೆದಿರತಕ್ಕವರು 9 ವರ್ಷಗಳು ಕಳೆದಿದ್ದಾಗ್ಗೂ ಹಣವನ್ನು ಕೊಡದೆ ಬರೀ ಬಡ್ಡಿಯನ್ನು ಮಾತ್ರ ತೆರುತ್ತಿದ್ದಾರೆ, ಹಣವನ್ನು ಆ ಅಧಿಕಾರಿಗಳು ಎಂದೂ ವಸೂಲ್ಮಾಡಿಲ್ಲ. ಆ ಕಾರಣದಿಂದ ಇಷ್ಟು ಬಾಕಿ ನಿಂತಿದೆ ಎಂದರೆ ತಾವು ಒಪ್ಪುತ್ತೀರಾ ?

** Copy placed in the Mysore Legislature Library *vide* No. 9 dated 15-12-1967.

ಶ್ರೀ ಪಿ. ಎಂ. ನಾಡಗೌಡ.—ಅದು ತಪ್ಪು ಭಾವನೆ. ಅಂಥ ನಿದರ್ಶನಗಳಿದ್ದರೆ ಅವನ್ನು ಸರ್ಕಾರದ ನಜರಿಗೆ ತರಲು, ನಾವು ಉಗ್ರ ಕ್ರಮ ಕೈಗೊಳ್ಳುತ್ತೇವೆ.

Sri K. H. PATIL.—I raise a point of order. The question put is the number of co-operative banks and societies which have received aid from the Government and the answer given in respect of defaulting societies, as 775. This is not the reply wanted by the member. He wanted to know the defaulter society as on date. What was the difficulty in submitting a list of societies ? May I presume that it is because they are those societies in which their favourites are there ?

Mr. DEPUTY SPEAKER.—There is no merit in the point of order.

Sri K. H. PATIL.—What is the policy of the Government in case the societies agreed to refund the loan or the share amount in view of the fact they do not want any interference by the Government on political reasons ?

Sri P. M. NAD GOUDA.—If the hon'bl member puts a separate question I will answer.

ಶ್ರೀ ಮಹದೇವ್ ಜಿ. ಬಣಕಾರ್.—ಸ್ವಾಮಿ, ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬರಲಿಲ್ಲ. ಅದುದರಿಂದ ಯಾವ ಕೆಲಸವೂ ಇಲ್ಲದೆ, ಯಾವ ಉದ್ಯೋಗವೂ ಇಲ್ಲದೆ ಯಾವ ಆಸ್ತಿಯೂ ಇಲ್ಲದೆ ದುಡಿಮೆಯೂ ಇಲ್ಲವಿದ್ದರೆ ಒಂದು ಸೊಸೈಟಿಯನ್ನು ಮಾಡಿಕೊಂಡರೆ ಸಾಕು ಎಂಬುದಾಗಿ ಜನರು ಹೇಳುತ್ತಿದ್ದಾರೆ ಅದು ನಿಜವೇ ?

(Laughter)

Rehabilitation Work of several Villages in Honnali Taluk.

97. Sri D. PARAMESWARAPPA (Honnali).—

Will the Minister for Public Works be pleased to state :—

(*a*) whether Government is aware that the work of Rehabilitation with regard to the villages of Biragondanahalli (2) Hanumanahalli (3) Lingapura (4) Ujjanipura (5) Ekkanahalli (6) Inoor under Bhadra Channel in Honnali Taluk and of Malai village, Didagur village in Honnali Taluk under Tunga channel is being delayed ;

(*b*) the reasons for the delay ;

(*c*) whether they would expedite this work early ?

A.—Sri VEERENDRA PATIL (Minister for Public Works).—

(*a*) Yes.

(*b*) Rehabilitation works are generally time consuming for some of the villages which have been recommended for shifting, no provision exists in the sanctioned project estimates and therefore they will have to be taken up after funds are provided for and necessary sanction obtained. Necessary action has been taken for shifting of the villages for which provision has been made in the estimates.

(*c*) Yes.